ದಿಃ 08.12.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಎಸ್.ಡಿ., ವಕೀಲರಿಂದ ವಾದಿ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ದಿಃ 15.05.2017 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ದಿಃ 15.05.2017 ರ ಕ್ರಯ ಪತ್ರದ ತಿದ್ದುಪಡಿಯನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ದಿಃ 08.10.1996 ರ ವಿಭಾಗ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 96/3 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ಎಂ.ಆರ್.ನಂಬರ್ ಹೆಚ್.41/16-17 ರ ಮ್ಯುಟೇಷನ್ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ದಿಃ 15.09.2022 ರ ಎಂ.ಆರ್. ರಿಜಿಸ್ಟರ್ ನ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, Index of land ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, Record of right ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿಃ 02.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಎನ್.ಎಸ್.ಜೆ ವಕೀಲರಿಂದ ಪ್ರತಿವಾದಿಗಳ ಪರವಾಗಿ**

3. 2016-2017 ರಲ್ಲಿ ನನ್ನ ತಂದೆಯು ದಾವ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ದಾವ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ನಾನು ದಾವ ಆಸ್ತಿಯನ್ನು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ದಾವ ಆಸ್ತಿಯನ್ನು ಅಳತೆ ಮಾಡಿಸಿ 11E ಸ್ಕೆಚ್ ಮಾಡಿಸಿರುತ್ತಾರೆ. ಸರ್ವೆ ನಂಬರ್ 96 ರಲ್ಲಿ ಒಟ್ಟು 1 ಎಕರೆ 36 ಗುಂಟಾ ಆಸ್ತಿ ಇರುತ್ತದೆ. ನನ್ನ ತಂದೆಗೆ ಸೇರಿದ ಸರ್ವೆ ನಂಬರ್ 96 ಆಸ್ತಿಯ ಬಗ್ಗೆ ನನಗೆ ಗೊತ್ತಿರುತ್ತದೆ. ಸರ್ವೆ ನಂಬರ್ 96 ರಲ್ಲಿ ಎಷ್ಟು ಪೋಡಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 96/1, ಸರ್ವೆ ನಂಬರ್ 96/2 ಮತ್ತು ಸರ್ವೆ ನಂಬರ್ 96/4 ಆಸ್ತಿಗಳು ನನ್ನ ತಂದೆಗೆ ಮಾರಾಟ ಮಾಡಿರುವ ಮಾರಾಟಗಾರರ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ್ 96/3 ರ ಯಾವ ದಿಕ್ಕಿಗೆ ಸರ್ವೆ ನಂಬರ್ 96/1 ಮತ್ತು ಸರ್ವೆ ನಂಬರ್ 96/2 ಆಸ್ತಿ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಯು ನಿಪಿ.1 ರಂತೆ ಮಾಡಿಕೊಂಡ ಕ್ರಯ ಪತ್ರದ ಚಕ್ಕುಬಂದಿಯು ತಪ್ಪಾಗಿರುತ್ತದೆ ಎಂದು ನಿ.ಪಿ.2 ರಂತೆ ತಿದ್ದುಪಡಿ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಿ.ಪಿ.1 ದಾಖಲೆಯಂತೆ ಸದರಿ ಆಸ್ತಿಯ ದಕ್ಷಿಣ ದಿಕ್ಕಿಗೆ ಶಾಂತಕುಮಾರ್ ರವರ ಆಸ್ತಿಯು ನಮೂದಾಗಿರುತ್ತದೆ. ನಿ.ಪಿ.1 ಕ್ರಯ ಪತ್ರದಂತೆ ಸದರಿ ಆಸ್ತಿಯ ದಕ್ಷಿಣ ದಿಕ್ಕಿಗೆ ಬೋಬಮ್ಮನ ಜಮೀನು ಇರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಾವ ಆಸ್ತಿಯ ದಕ್ಷಿಣ ದಿಕ್ಕಿಗೆ ಬೋಬಮ್ಮ ರವರ ಆಸ್ತಿ ಇರುತ್ತದೆ ಎಂದು ನಾನು ವಾದ ಪತ್ರದಲ್ಲಿ ಕಾಣಿಸಿರುತ್ತೇನೆ. ದಾವ ಆಸ್ತಿಯಲ್ಲಿ 3 ಗುಂಟೆ ಕರಾಬು ಆಸ್ತಿ ಇರುತ್ತದೆ ಎಂದು

ನನ್ನ ತಂದೆಯು ನಮೂದು ಮಾಡಿಸಿರುತ್ತಾರೆ. ಸರ್ವೆ ನಂಬರ್ 96/3 ರಲ್ಲಿ ಕರಾಬು ಕಳೆದು 1 ಎಕರೆ 36 ಗುಂಟೆ ಆಸ್ತಿ ನನ್ನ ತಂದೆ ಖರೀದಿ ಮಾಡಿರುತ್ತಾರೆ. ಸದರಿ ಕರಾಬು 'ಬ' ಕರಾಬು ಆಗಿರುತ್ತದೆ ಎಂದರೆ ಸರಿ. 'ಬ' ಕರಾಬು ಸರ್ಕಾರಕ್ಕೆ ಮಾತ್ರ ಸೇರಿರುವ ಕರಾಬು ಎಂದರೆ ಸರಿ. ಸರ್ವೆ ನಂಬರ್ 96/3 ರಲ್ಲಿ 3 ಗುಂಟಾ ಕರಾಬಿನಲ್ಲಿ ದಿಬ್ಬ ಇರುತ್ತದೆ. ದಾವ ಆಸ್ತಿಯ ಪಶ್ಚಿಮದಿಂದ ಪೂರ್ವದ ಕಡೆಗೆ ದಾವ ಆಸ್ತಿಯಲ್ಲಿ ಕಾಲುವೆ ಇರುತ್ತದೆ. ಸದರಿ ಕಾಲುವೆಯಲ್ಲಿ ಮತ್ತು ದಿಬ್ಬದ ಬಗ್ಗೆ ನಾನು ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 12.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಪಾಟೀ ಸವಾಲು ಶ್ರೀ ಎನ್.ಎಸ್.ಜೆ ವಕೀಲರಿಂದ ಪ್ರತಿವಾದಿಗಳ ಪರವಾಗಿ**

4. ದಾವ ಆಸ್ತಿಯು ದಿಬ್ಬದ ನಂತರ ಕಾಲುವೆ ಕಳೆದು 10 ಅಡಿ ಕೆಳಗೆ ಇರುತ್ತದೆ ಎಂದರೆ ಸರಿಯಲ್ಲ. ದಿಬ್ಬದಿಂದ 10 ಅಡಿ ಕೆಳಗಡೆ ಕಾಲುವೆಯಿಂದ ಸುಮಾರು 100 ಅಡಿ ದೂರದಲ್ಲಿ ದಾವ ಆಸ್ತಿ ಇರುತ್ತದೆ. 2016 ರಲ್ಲಿ ನಾನು ದಾವ ಆಸ್ತಿಯಲ್ಲಿ ಕಾಲುವೆಯನ್ನು ಮಾಡಿರುತ್ತೇನೆ. ಸದರಿ ಕಾಲುವೆಯ ನೀರಿನ ಮೂಲವು ಶಾಂತಕುಮಾರ್ ರವರ ಜಮೀನಿನಲ್ಲಿ ಇರುತ್ತದೆ. ಸದರಿ ನೀರು ನನ್ನ ಜಮೀನಿನ ಕಾಲುವೆಯ ಮೂಲಕ ಪಕ್ಕದ ಗದ್ದೆಗೆ ಹರಿದು ಹೋಗುತ್ತದೆ. ಸ್ವಾಭಾವಿಕವಾಗಿ ಹರಿದುಹೋಗುತ್ತಿರುವ ಕಾಲುವೆಯನ್ನು 2016 ರಲ್ಲಿ ನಾನೇ ಕಾಲುವೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯು ಗದ್ದೆ ಆಗಿರುತ್ತದೆ ಎಂದರೆ ಸರಿ. ನಾನು ದಾವ ಆಸ್ತಿಯನ್ನು ಖರೀದಿ ಮಾಡಿದ ನಂತರ ತೋಟ ಮಾಡಿರುತ್ತೇನೆ. ಪ್ರತಿವಾದಿಗಳ ಜಮೀನಿನಲ್ಲಿ ಸಾಕಷ್ಟು ಬೆಳೆದು ನಿಂತಿರುವ ಕಾಫಿ ಗಿಡಗಳು ಇರುತ್ತವೆ ಎಂದರೆ ಸಾಕ್ಷಿಯು ಸದರಿ ಕಾಫಿ ಗಿಡಗಳನ್ನು ನಾನೇ ಹಾಕಿರುತ್ತೇನೆ, ನನ್ನ ಜಮೀನನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಜಮೀನಿನಲ್ಲಿ ಇರುವ ಕಾಫಿ ಗಿಡಗಳಿಗೆ ಸುಮಾರು 25 ವರ್ಷ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಇರುವ ಕಾಫಿ ಗಿಡಗಳ ವಯಸ್ಸು ಮತ್ತು ಪ್ರತಿವಾದಿಗಳ ಜಮೀನಿನಲ್ಲಿ ಇರುವ ಕಾಫಿ ಗಿಡದ ವಯಸ್ಸನ್ನು ತಿಳಿಯಲು ತಜ್ಞರ ಅಭಿಪ್ರಾಯ ಪಡೆಯಲು ನನ್ನಿಂದ ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳ ಸ್ವತ್ತು ದಿಬ್ಬದ ಮೇಲೆ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಸ್ವತ್ತು ನನ್ನದೇ ಸ್ವತ್ತು ಆಗಿರುತ್ತದೆ

ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಸರ್ವೆ ನಂಬರ್ 114 ರಲ್ಲಿ ಇರುವ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ. 2ನೇ ಪ್ರತಿವಾದಿಯ ಸ್ವತ್ತಿನಲ್ಲಿಯು ನನಗೆ ಯಾವುದೇ ಅಧಿಕಾರ ಇರುವುದಿಲ್ಲ. 2ನೇ ಪ್ರತಿವಾದಿಗೆ ಸರ್ವೆ ನಂಬರ್ 98/2 ರಲ್ಲಿ ಕಾಫಿ ತೋಟ ಇರುತ್ತದೆ ಎಂದರೆ ಸರಿ. ದಾವ ಆಸ್ತಿಯ ಕರಾಬು ಹುತ್ತಾರ್ ಅನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಿ.ಪಿ.1 ರ ಚಕ್ಕುಬಂದಿ ಸರಿ ಇರುವುದಿಲ್ಲ ಎಂದು ನನಗೆ 11E ಸ್ಕೆಚ್ ಮಾಡಿದಾಗ ಗೊತ್ತಾಗಿರುತ್ತದೆ. ನನ್ನ ತಂದೆಯು ದಾವ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ 11E ಸ್ಕೆಚ್ ಮಾಡಿ ದಾವ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. 11E ಸ್ಕೆಚ್ ನಲ್ಲಿ ಹೇಳಿರುವ ಚೆಕ್ಕುಬಂದಿಯನ್ನು ನಿ.ಪಿ.1 ರ ಕ್ರಯ ಪತ್ರದಲ್ಲಿ ನಮೂದು ಮಾಡಲು ನನ್ನ ತಂದೆಗೆ ಯಾವುದೇ ತೊಂದರೆ ಇರಲಿಲ್ಲ. ಕ್ರಯ ಪತ್ರದಲ್ಲಿ ನನ್ನ ತಂದೆಯು ಚಕ್ಕುಬಂದಿಯನ್ನು ಸರ್ವೆ ನಕ್ಷೆ ಆಧಾರದ ಮೇಲೆಯೇ ನಮೂದು ಮಾಡಿಸಿರುತ್ತಾರೆ. ಕ್ರಯ ಪತ್ರ ಆದ ತಕ್ಷಣ ಕ್ರಯ ಪತ್ರದಲ್ಲಿ ನಮೂದು ಮಾಡಿರುವ ಚಕ್ಕುಬಂದಿಯನ್ನು ತಿದ್ದುಪಡಿ ಮಾಡಿಕೊಳ್ಳಲು ನನ್ನ ತಂದೆಗೆ ಆರ್ಥಿಕ ತೊಂದರೆ ಇತ್ತು. ತಿದ್ದುಪಡಿ ಪತ್ರ ಮಾಡಲು ವಿಶೇಷ ಮುದ್ರಾಂಕ ಶುಲ್ಕ ಮತ್ತು ನೊಂದಣಿ ಶುಲ್ಕ ಇಲ್ಲದಿದ್ದರು ತಿದ್ದುಪಡಿ ಪತ್ರ ಮಾಡಿಕೊಳ್ಳಲು ಆರ್ಥಿಕ ತೊಂದರೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ತಿದ್ದುಪಡಿ ಪತ್ರಕ್ಕೆ ಕೇವಲ ರೂ.200-00 ಮುದ್ರಾಂಕ ಶುಲ್ಕ ಮತ್ತು ರೂ.200-00 ನೊಂದಾವಣಿ ಶುಲ್ಕವನ್ನು ಪಾವತಿ ಮಾಡಿರುತ್ತೇನೆ ಎಂದರೆ ಸರಿ. ಈ ದಾವೆಯನ್ನು ದಾಖಲು ಮಾಡುವ ಉದ್ದೇಶದಿಂದ ನನ್ನ ತಂದೆಯು ನಿ.ಪಿ.2 ದಾಖಲಾತಿಯನ್ನು ಮಾಡಿರುತ್ತಾರೆ ಎಂದರೆ ಸರಿ. ಹದ್ದು ಬಸ್ತು ಆಗಿರುವ ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಹದ್ದುಬಸ್ತು ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡದಿದ್ದರು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹದ್ದುಬಸ್ತು ಸರ್ವೆ ಮಾಡುವ ಪೂರ್ವದಲ್ಲಿ ಬಾಜುದಾರರಿಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ನನ್ನ ತಂದೆಗೂ ಸರ್ವೆ ಪೂರ್ವದಲ್ಲಿ ನೋಟೀಸು ಬಂದಿರುತ್ತದೆ ಎಂದರೆ ಸರಿ. ಸರ್ವೆ ನೋಟೀಸನ್ನು ಮತ್ತು ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ಯಾವ ದಿನಾಂಕ ಹದ್ದುಬಸ್ತು ಸರ್ವೆ ಆಗಿರುತ್ತದೆ ಎಂದು ನನಗೆ ದಿನಾಂಕ ನೆನಪಿಲ್ಲ. ಹದ್ದುಬಸ್ತು ಸರ್ವೆ ಯನ್ನು ದೀಪಕ್ ಸರ್ವೆಯರ್ ಮಾಡಿರುತ್ತಾರೆ. ನಾನು ಹೇಳಿದಂತೆ ಯಾವುದೇ ಹದ್ದುಬಸ್ತು ಸರ್ವೆ ಆಗದೇ ಇದ್ದರು ಕಾರಣ ನಾನು ಆ ಬಗ್ಗೆ ಸರ್ವೆ ನಕ್ಷೆಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

5. ದಾವ ಆಸ್ತಿಯ ಪೂರ್ವ ದಿಕ್ಕಿಗೆ 2 ನೇ ಪ್ರತಿವಾದಿಯ ಜಮೀನು ಇರುತ್ತದೆ. ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ 1 ನೇ ಪ್ರತಿವಾದಿಯ ಜಮೀನು ಇರುತ್ತದೆ. ನನ್ನ ತಂದೆಯು ದಾವೆಯಲ್ಲಿ ದಾವ ಆಸ್ತಿಯ ಚಕ್ಕುಬಂದಿ ಏನು ನಮೂದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಶಾಂತಕುಮಾರ್ ರವರ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಬೋಬಮ್ಮ ರವರ ಜಮೀನು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. 11E ಸ್ಕೆಚ್ ನಲ್ಲಿ ಚಕ್ಕುಬಂದಿಯಲ್ಲಿ ಹಿಡುವಳಿದಾರರ ಹೆಸರನ್ನು ನಮೂದು ಮಾಡುವುದಿಲ್ಲ ಕೇವಲ ಸರ್ವೆ ನಂಬರ್ ಗಳನ್ನು ಮಾತ್ರ ನಮೂದು ಮಾಡುತ್ತದೆ ಎಂದರೆ ಸರಿ. 11E ಸ್ಕೆಚ್ ನ್ನು ನಾನು ಪರಿಶೀಲಿಸಿರುವುದಿಲ್ಲ. ನಿ.ಪಿ.2 ತಿದ್ದುಪಡಿ ಪತ್ರದಲ್ಲಿ ಚಕ್ಕುಬಂದಿಯಲ್ಲಿ ಸರ್ವೆ ನಂಬರ್ ಗಳನ್ನು ನಮೂದು ಮಾಡಿರುವುದಿಲ್ಲ ಹೆಸರುಗಳನ್ನು ನಮೂದು ಮಾಡಿರುತ್ತದೆ ಎಂದರೆ ಸರಿ. ನಿ.ಪಿ.3 ರಲ್ಲಿ ದಾವ ಆಸ್ತಿಯು ನನ್ನ ತಂದೆಯ ಮಾರಾಟಗಾರರ ಹಿಸ್ಸೆಗೆ ಬಂದಿರುತ್ತದೆ. ನಿ.ಪಿ.3 ರಲ್ಲಿ ದಾವ ಆಸ್ತಿಯ ಚಕ್ಕುಬಂದಿ ಏನು ತೋರಿಸಿರುತ್ತಾರೆ ಎಂದು ನಾನು ಗಮನಿಸಿರುವುದಿಲ್ಲ. ನನ್ನ ಜಮೀನಿನಲ್ಲಿ ಮತ್ತು ಪ್ರತಿವಾದಿಗಳ ಜಮೀನಿನಲ್ಲಿ

ರೋಬಸ್ಟ ಕಾಫಿಯ ಗಿಡಗಳು ಇರುತ್ತವೆ. ನನ್ನ ಜಮೀನಿನಲ್ಲಿ ಇರುವ ಕಾಫಿ ಗಿಡಗಳಿಗೆ 8 ವರ್ಷ ವಯಸ್ಸಾಗಿರುತ್ತದೆ. ಪ್ರತಿವಾದಿಗಳ ಜಮೀನಿನಲ್ಲಿ ಇರುವ ಕಾಫಿ ಗಿಡಗಳಿಗೆ ಹೆಚ್ಚು ವಯಸ್ಸಾಗಿರುತ್ತದೆ ಎಂದರೆ ಸಾಕ್ಷಿಯು 8 ವರ್ಷ ವಯಸ್ಸಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 96/3 ರಲ್ಲಿ 3 ಗುಂಟೆ ಜಮೀನು ಕಾಲುವೆಗೆ ಬಿಟ್ಟಿರುವ ಕರಾಬು ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಜಮೀನನ್ನು ಒತ್ತುವರಿ ಮಾಡದೇ ಇದ್ದರು ಸಹ ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಬ್ಬದ ಮೇಲೆ ನನಗೆ ಸೇರಿದ ಯಾವುದೇ ಜಮೀನು ಇರದಿದ್ದರು ಸಹ ಪ್ರತಿವಾದಿಗಳಿಗೆ ಸೇರಿದ ಜಮೀನು ನನಗೆ ಸೇರಿರುತ್ತದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಜಮೀನು ಪೋಡಿ ಆಗಿರುತ್ತದೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಜಮೀನು ಪೋಡಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಜಮೀನನ್ನು ನನ್ನದಾಗಿಸಬೇಕು ಎನ್ನುವ ಉದ್ದೇಶದಿಂದ ನಾನು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಜಮೀನು ಹಿಂದೆ ತಗ್ಗಿನ ಗದ್ದೆ ಪ್ರದೇಶವಾಗಿದ್ದು ಅದನ್ನು ನಾನು ಕಾಫಿ ತೋಟ ಮಾಡಿರುತ್ತೇನೆ ಎಂದರೆ ಸರಿ. ನನ್ನ ಜಮೀನಿನಲ್ಲಿ ಕಾಫಿ, ಅಡಿಕೆ ಮತ್ತು ಮೆಣಸು ಇರುತ್ತದೆ. ರೆಬೊಲೋ ರವರಿಗೆ ಸೇರಿದ ಜಮೀನು ದಾವ ಆಸ್ತಿಯ ಪಕ್ಕದಲ್ಲಿ ಇರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಯನ್ನು ನಾನು ಖರೀದಿ ಮಾಡುವ ಪೂರ್ವದಲ್ಲಿಯೇ ಪೋಡಿಯಾಗಿರುತ್ತದೆ. ಅಟ್ಲಾಸ್ ನಕ್ಷೆ ಮತ್ತು ಪೋಡಿ ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ದಾವ ಆಸ್ತಿಯ ಟಿಪ್ಪಣಿಯನ್ನು ನಾನು ಹಾಜರು ಮಾಡಿರುವುದಿಲ್ಲ. ದಾವ ಆಸ್ತಿಯು ಯಾವ ವರ್ಷ ಪೋಡಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಜಮೀನಿಗೆ ಬೇಲಿ ಇರುವುದಿಲ್ಲ ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು

ಒತ್ತುವರಿ ಮಾಡಿ ನನ್ನ ಜಮೀನಿಗೆ ಬೇಲಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಜಮೀನಿಗೆ ಇರುವ ಬೇಲಿಯು ದಿಬ್ಬರ ಮೇಲೆ ಇರುವ ಲಾಗಯತ್ ನಿಂದ ಇರುವ ಬೇಲಿ ಎಂದರೆ ಸಾಕ್ಷಿಯು ದಿಬ್ಬದ ಕೆಳಗೆ ಪ್ರತಿವಾದಿಗಳು ಬೇಲಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ದಿಬ್ಬದ ಕೆಳಗೆ ಬೇಲಿ  ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಿತ್ರೇಗೌಡರ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸುಮಿತ್ರೇಗೌಡರ ಜಮೀನಿನಲ್ಲಿ ಈಗ ಕಾಫಿ ತೋಟ ಇರುತ್ತದೆ. ಈ ದಾವೆಯಲ್ಲಿ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪ್ರತಿವಾದಿಗಳು ಯಾವತ್ತು ನನ್ನ ಜಮೀನನ್ನು ಒತ್ತುವರಿ ಮಾಡಿ ಬೇಲಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಬಿ ಮತ್ತು ಸಿ ಅನುಸೂಚಿತ ಸ್ವತ್ತನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹದ್ದುಬಸ್ತು ನಕ್ಷೆಯಲ್ಲಿ ದಾವ ಆಸ್ತಿಯ ಉತ್ತರ ದಿಕ್ಕಿಗೆ ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ತೋರಿಸಿರುತ್ತದೆ. ದಾವ ಆಸ್ತಿಯ ಉತ್ತರ ದಿಕ್ಕಿಗೆ ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವತ್ತೂ ನನ್ನ ತಂದೆಯ ಕಾಲದಿಂದಲು ದಾವ ಆಸ್ತಿಯ ಹದ್ದುಬಸ್ತು ಸರ್ವೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ